**All India Radio: Bangalore**
**National Bulletin In Kannada**
**15.09.2026 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**15.09.2026 1.10 pm**

**<>><><*><><<>**

ಮುಖ್ಯಾಂಶಗಳು

**೧. ಹತ್ತನೇ ವಿಶ್ವ ವರ್ತುಲ ಆರ್ಥಿಕತೆ ವೇದಿಕೆ ೨೦೨೬ಕ್ಕೆ ಗುಜರಾತ್‌ನ ಗಾಂಧಿನಗರದಲ್ಲಿ ಚಾಲನೆ**

**೨. ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಸ್ಮರಣಾರ್ಥ; ದೇಶಾದ್ಯಂತ ರಾಷ್ಟ್ರೀಯ ಅಭಿಯಂತರರ ದಿನಾಚರಣೆ- ಪ್ರಧಾನಿ ಸೇರಿ ಗಣ್ಯರಿಂದ ಗೌರವ ನಮನ**

**೩. ಡಿಆರ್‌ಡಿಒ-ಖಾಸಗಿ ಉದ್ಯಮ ಸಹಭಾಗಿತ್ವದಿಂದ ಭಾರತಕ್ಕೆ ಜಾಗತಿಕ ರಕ್ಷಣಾ ಉತ್ಪಾದನಾ ಕೇಂದ್ರವಾಗುವ ಸಾಮರ್ಥ್ಯ - ರಕ್ಷಣಾ ಸಚಿವ ರಾಜನಾಥ್ ಸಿಂಗ್**

**೪. ದೂರದರ್ಶನ ಸಂಸ್ಥೆಗೆ ಇಂದು ೬೭ನೇ ಸಂಸ್ಥಾಪನಾ ದಿನದ ಸಂಭ್ರಮ**

**೫. ಭಾರತ-ಅಫ್ಘಾನಿಸ್ತಾನ್ ಪುರುಷರ ಟಿ-೨೦ ಕ್ರಿಕೆಟ್ ಸರಣಿ; ಇಂದು ಎರಡನೇ ಪಂದ್ಯ**

**<>><><*><><<>**

ಗುಜರಾತ್‌ನ ಗಾಂಧಿನಗರದ ಮಹಾತ್ಮ ಮಂದಿರದಲ್ಲಿ ವಿಶ್ವ ವರ್ತುಲ ಆರ್ಥಿಕತೆ ವೇದಿಕೆ ೨೦೨೬ ಆರಂಭಗೊಂಡಿದೆ. ದಕ್ಷಿಣ ಏಷ್ಯಾದಲ್ಲಿ ಇದೇ ಮೊದಲ ಬಾರಿಗೆ ಈ ಜಾಗತಿಕ ಸಮಾವೇಶ ನಡೆಯುತ್ತಿದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಹಾಗೂ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಸಮಾವೇಶವನ್ನು ಜಂಟಿಯಾಗಿ ಉದ್ಘಾಟಿಸಿದರು. ಬಳಿಕ ಮಾತನಾಡಿದ ಸಚಿವ ಭೂಪೇಂದ್ರ ಯಾದವ್, ವರ್ತುಲ ಆರ್ಥಿಕತೆಯ ತತ್ವಗಳನ್ನು ಸುಸ್ಥಿರ ಅಭಿವೃದ್ಧಿಯ ಭಾಗವಾಗಿಸುವ ನಿಟ್ಟಿನಲ್ಲಿ ಭಾರತ ಬದ್ಧವಾಗಿದೆ. ವಿಸ್ತರಿತ ಉತ್ಪಾದಕರ ಹೊಣೆಗಾರಿಕೆ ನಿಯಮಗಳು ಮತ್ತು ಮಿಷನ್ ಲೈಫ್ ಸೇರಿದಂತೆ ಹಲವು ಉಪಕ್ರಮಗಳು ಭಾರತದ ವರ್ತುಲ ಆರ್ಥಿಕತೆಯತ್ತ ಸಾಗುವಿಕೆಯಲ್ಲಿ ಪ್ರಮುಖ ಹೆಜ್ಜೆಗಳಾಗಿವೆ ಎಂದು ಅವರು ಹೇಳಿದ್ದಾರೆ. ಎರಡು ದಿನಗಳ ವೇದಿಕೆಯಲ್ಲಿ ಕೃತಕ ಬುದ್ಧಿಮತ್ತೆ, ಹಸಿರು ಇಂಧನ, ಸುಸ್ಥಿರ ಹಣಕಾಸು, ಆಡಳಿತ ಮತ್ತು ನವೋದ್ಯಮ ಕ್ಷೇತ್ರಗಳ ಕುರಿತು ನಾಲ್ಕು ಪೂರ್ಣ ಅವಧಿಯ

ಅಧಿವೇಶನಗಳು ಹಾಗೂ ೧೮ ವಿಷಯಾಧಾರಿತ ಅಧಿವೇಶನಗಳು ನಡೆಯಲಿವೆ. ೧೨೫ಕ್ಕೂ ಹೆಚ್ಚು ಪ್ರದರ್ಶಕರು ಭಾಗವಹಿಸುವ ಅಂತಾರಾಷ್ಟ್ರೀಯ ವಸ್ತುಪ್ರದರ್ಶನವನ್ನೂ ಆಯೋಜಿಸಲಾಗಿದೆ.

**<>><><*><><<>**

ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನದ ಅಂಗವಾಗಿ ಇಂದು ರಾಷ್ಟ್ರೀಯ ಅಭಿಯಂತರರ ದಿನ ಆಚರಿಸಲಾಗುತ್ತಿದೆ. ದೇಶದ ಅಭಿವೃದ್ಧಿಯಲ್ಲಿ ಎಂಜಿನಿಯರ್‌ಗಳ ಕೊಡುಗೆಯನ್ನು ಸ್ಮರಿಸುವ ಉದ್ದೇಶದಿಂದ ಪ್ರತಿವರ್ಷ ಸೆಪ್ಟೆಂಬರ್ ೧೫ರಂದು ಈ ದಿನವನ್ನು ಆಚರಿಸಲಾಗುತ್ತದೆ. ಸರ್.ಎಂ. ವಿಶ್ವೇಶ್ವರಯ್ಯ ಅವರು ೧೮೬೧ ರ ಸೆಪ್ಟೆಂಬರ್ ೧೫ ರಂದು ಮುದ್ದೇನಹಳ್ಳಿಯಲ್ಲಿ ಜನಿಸಿದರು. ೧೯೧೨ ರಿಂದ ೧೯೧೮ ರವರೆಗೆ ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯಲ್ಲಿ ೧೯ನೇ ದಿವಾನರಾಗಿ ಕೆಲಸ ಮಾಡಿದರು. ದಿವಾನರಾಗಿದ್ದ ಸಂದರ್ಭದಲ್ಲಿ ಅವರು, ಕೃಷಿ, ಕೈಗಾರಿಕೆ ಮತ್ತು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಸರ್. ಎಂ. ವಿಶ್ವೇಶ್ವರಯ್ಯ ಅವರಿಗೆ ಗೌರವ ನಮನ ಸಲ್ಲಿಸಿ, ರಾಷ್ಟ್ರ ನಿರ್ಮಾಣದ ಅವರ ದೂರದೃಷ್ಟಿ ಸದಾ ಸ್ಫೂರ್ತಿದಾಯಕವಾಗಿದೆ. ಉತ್ತಮ ಭವಿಷ್ಯಕ್ಕಾಗಿ ನಿರ್ಮಾಣ, ನಾವೀನ್ಯತೆ ಮತ್ತು ಪರಿಹಾರಗಳನ್ನು ಒದಗಿಸುವ ಎಂಜಿನಿಯರ್‌ಗಳ ಕೊಡುಗೆಯನ್ನು ಅವರು ಶ್ಲಾಘಿಸಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಗೃಹ ಸಚಿವ ಅಮಿತ್ ಶಾ ಅವರು ಕೂಡ ವಿಶ್ವೇಶ್ವರಯ್ಯ ಅವರ ರಾಷ್ಟ್ರ ನಿರ್ಮಾಣದ ಕೊಡುಗೆಯನ್ನು ಸ್ಮರಿಸಿ, ಎಲ್ಲ ಅಭಿಯಂತರರಿಗೆ ಶುಭಾಶಯ ಕೋರಿದ್ದಾರೆ.

**<>><><*><><<>**

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ-ಡಿಆರ್‌ಡಿಒ ಹಾಗೂ ಖಾಸಗಿ ಉದ್ಯಮ ರಂಗದ ಜಂಟಿ ಸಹಭಾಗಿತ್ವವು ಭಾರತವನ್ನು ಜಾಗತಿಕ ರಕ್ಷಣಾ ಉತ್ಪಾದನಾ ಕೇಂದ್ರವನ್ನಾಗಿ ಮಾಡಬಲ್ಲದು ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆದ 'ವಿಮರ್ಶ್ ೨೦೨೪' ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಕ್ಷಿಪಣಿಗಳು, ಯುದ್ಧ ವಿಮಾನಗಳು ಹಾಗೂ ಕೃತಕ ಬುದ್ಧಿಮತ್ತೆಯವರೆಗೆ ಡಿಆರ್‌ಡಿಒ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದೆ ಎಂದರು. ರಕ್ಷಣಾ ವಲಯದಲ್ಲಿ ಸಂಪೂರ್ಣ ಸ್ವಾವಲಂಬನೆ ಸಾಧಿಸಲು ಕೇವಲ ಸರ್ಕಾರ ಅಥವಾ ಡಿಆರ್‌ಡಿಒ ಪ್ರಯತ್ನಗಳಷ್ಟೇ ಸಾಲದು; ಖಾಸಗಿ ಉದ್ಯಮ ರಂಗದ ಸಹಯೋಗ ಅತ್ಯಗತ್ಯ ಎಂದು ಸಚಿವರು ಒತ್ತಿಹೇಳಿದರು. 'ಮೇಕ್ ಇನ್ ಇಂಡಿಯಾ', 'ಐಡೆಕ್ಸ್' ಯೋಜನೆಗಳು ಹಾಗೂ ರಕ್ಷಣಾ ಆಯವ್ಯಯದ ಶೇಕಡಾ ೨೫ ರಷ್ಟನ್ನು ಖಾಸಗಿ ವಲಯಕ್ಕೆ ಮೀಸಲಿಟ್ಟಿರುವುದು

ಭಾರತವನ್ನು ಆಮದು ಮುಕ್ತಗೊಳಿಸಿ ಸ್ವಾವಲಂಬಿಯನ್ನಾಗಿ ಮಾಡಲು ಕೈಗೊಂಡ ನಿರ್ಣಾಯಕ ಕ್ರಮಗಳಾಗಿವೆ ಎಂದು ಅವರು ವಿವರಿಸಿದರು.

<>><><*><><<>

ಪ್ರಜಾಪ್ರಭುತ್ವ ಭಾರತಕ್ಕೆ ಹೊಸದಲ್ಲ, ದೇಶದ ಪ್ರಾಚೀನ ನಾಗರಿಕತೆಯಲ್ಲಿ ಅದರ ಆಳವಾದ ಬೇರುಗಳಿವೆ ಎಂದು ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ಹೇಳಿದ್ದಾರೆ. ಪ್ರಜಾಪ್ರಭುತ್ವ ದಿನದ ಅಂಗವಾಗಿ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿರುವ ಅವರು, ಋಗ್ವೇದದಲ್ಲಿ ಉಲ್ಲೇಖವಾಗಿರುವ ಸಭಾ ಮತ್ತು ಸಮಿತಿ ಸೇರಿದಂತೆ ಪ್ರಾಚೀನ ಸಭೆಗಳು ಚರ್ಚೆ, ಸಮಾಲೋಚನೆ ಹಾಗೂ ಸಾಮೂಹಿಕ ನಿರ್ಧಾರಕ್ಕೆ ಮಹತ್ವ ನೀಡಿದ್ದವು ಎಂದು ತಿಳಿಸಿದ್ದಾರೆ. ಪ್ರಜಾಪ್ರಭುತ್ವ ಕೇವಲ ಚುನಾವಣೆಗಳಿಗೆ ಸೀಮಿತವಲ್ಲ. ಸಂವಾದ, ಜನರ ಭಾಗವಹಿಸುವಿಕೆ, ವೈವಿಧ್ಯತೆಗೆ ಗೌರವ ಮತ್ತು ಪ್ರತಿಯೊಬ್ಬ ನಾಗರಿಕನ ಘನತೆಯನ್ನೂ ಒಳಗೊಂಡಿದೆ ಎಂದು ಅವರು ಹೇಳಿದ್ದಾರೆ.

<>><><*><><<>

ಭಾರತ ಮತ್ತು ಕೆನಡಾ ನಡುವೆ ಪ್ರಸ್ತಾವಿತ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ-ಸಿಇಪಿಎ ಕುರಿತ ೪ನೇ ಸುತ್ತಿನ ಮಾತುಕತೆ ನವದೆಹಲಿಯಲ್ಲಿ ಆರಂಭವಾಗಿದೆ. ೨೦೩೦ರ ವೇಳೆಗೆ ದ್ವಿಪಕ್ಷೀಯ ವ್ಯಾಪಾರವನ್ನು ೫೦ ಬಿಲಿಯನ್ ಅಮೆರಿಕನ್ ಡಾಲರ್‌ಗೆ ಹೆಚ್ಚಿಸುವ ಗುರಿಯನ್ನು ಎರಡೂ ದೇಶಗಳು ಹೊಂದಿವೆ. ನಿನ್ನೆ ಆರಂಭಗೊಂಡಿರುವ ಐದು ದಿನಗಳ ಮಾತುಕತೆ ಇದೇ ೧೮ರವರೆಗೆ ನಡೆಯಲಿದ್ದು, ಸರಕು ಮತ್ತು ಸೇವೆಗಳ ವ್ಯಾಪಾರ, ನಿಯಮಗಳು ಹಾಗೂ ತಾಂತ್ರಿಕ ವ್ಯಾಪಾರ ಅಡೆತಡೆ ಸೇರಿದಂತೆ ಪ್ರಮುಖ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ೨೦೨೫-೨೬ರಲ್ಲಿ ಭಾರತ-ಕೆನಡಾ ದ್ವಿಪಕ್ಷೀಯ ವ್ಯಾಪಾರ ಶೇಕಡ ೮.೨೨ರಷ್ಟು ಇಳಿಕೆಯಾಗಿ ೭.೯೫ ಬಿಲಿಯನ್ ಡಾಲರ್‌ಗೆ ತಲುಪಿದೆ.

<>><><*><><<>

ಭಾರತದ ಸಾರ್ವಜನಿಕ ಸೇವಾ ಪ್ರಸಾರ ಸಂಸ್ಥೆ ದೂರದರ್ಶನ ಇಂದು ೬೭ನೇ ಸಂಸ್ಥಾಪನಾ ದಿನ ಆಚರಿಸುತ್ತಿದೆ. ೧೯೫೯ರಲ್ಲಿ ಆಕಾಶವಾಣಿಯ ಪ್ರಾಯೋಗಿಕ ದೂರದರ್ಶನ ಸೇವೆಯಾಗಿ ಆರಂಭಗೊಂಡ ದೂರದರ್ಶನ, ದಶಕಗಳ ಅವಧಿಯಲ್ಲಿ ಮಾಹಿತಿ ಪ್ರಸಾರ, ಸಂಸ್ಕೃತಿ ಸಂರಕ್ಷಣೆ ಹಾಗೂ ರಾಷ್ಟ್ರೀಯ ಏಕತೆಗೆ ಮಹತ್ವದ ವೇದಿಕೆಯಾಗಿ ಬೆಳೆದಿದೆ. ಉಪಗ್ರಹ ಮತ್ತು ನೇರ ಪ್ರಸಾರ

ಸೇವೆಗಳ ಮೂಲಕ ದೇಶದ ಬಹುತೇಕ ಎಲ್ಲ ಜನರನ್ನು ತಲುಪುತ್ತಿದೆ. ೧೯೫೯ರ ಸೆಪ್ಟೆಂಬರ್ ೧೫ರಂದು ಅಂದಿನ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಅವರು ದೂರದರ್ಶನದ ಮೊದಲ ಪ್ರಸಾರಕ್ಕೆ ಚಾಲನೆ ನೀಡಿದರು. ೧೯೭೬ರ ಏಪ್ರಿಲ್ ೧ರಂದು ಆಕಾಶವಾಣಿಯಿಂದ ಪ್ರತ್ಯೇಕಗೊಂಡು ದೂರದರ್ಶನ ಕಾರ್ಯಾಚರಣಾ ಸ್ವಾಯತ್ತತೆ ಪಡೆದುಕೊಂಡಿತು. ೧೯೮೨ರಲ್ಲಿ ದೆಹಲಿಯಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದ ಸಂದರ್ಭದಲ್ಲಿ ವರ್ಣಭರಿತ ಪ್ರಸಾರ ಆರಂಭಗೊಂಡಿದ್ದು, ದೂರದರ್ಶನದ ವೀಕ್ಷಕರ ಸಂಖ್ಯೆ ಮತ್ತು ಜನಪ್ರಿಯತೆಯಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಯಿತು. ೧೯೯೭ರಲ್ಲಿ ಪ್ರಸಾರ ಭಾರತಿಯನ್ನು ಸ್ವಾಯತ್ತ ಸಂಸ್ಥೆಯಾಗಿ ಸ್ಥಾಪಿಸಿದ ಬಳಿಕ, ಆಕಾಶವಾಣಿಯೊಂದಿಗೆ ಸಾರ್ವಜನಿಕ ಪ್ರಸಾರದ ಏಕೀಕೃತ ವ್ಯವಸ್ಥೆಯಡಿ ದೂರದರ್ಶನ ಮತ್ತಷ್ಟು ವಿಸ್ತರಿಸಿತು. ಪ್ರಸ್ತುತ ೩೫ ಉಪಗ್ರಹ ವಾಹಿನಿಗಳು ಮತ್ತು ೬೬ ಸ್ಟುಡಿಯೊ ಕೇಂದ್ರಗಳ ಮೂಲಕ ೨೪ಕ್ಕೂ ಹೆಚ್ಚು ಭಾಷೆಗಳು ಹಾಗೂ ವಿವಿಧ ಉಪಭಾಷೆಗಳಲ್ಲಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ. ಇಂದಿಗೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡು ದೂರದರ್ಶನ ವೀಕ್ಷಕರ ಮನದಾಳದಲ್ಲಿ ಛಾಪುಮೂಡಿಸುತ್ತಿದೆ.

**<>><><*><><<>**

ರಷ್ಯಾ ಮತ್ತು ಉಕ್ರೇನ್ ಪರಸ್ಪರರ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವುದನ್ನು ಸ್ಥಗಿತಗೊಳಿಸಲು ಒಪ್ಪಿಕೊಂಡಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ರಷ್ಯಾದ ಇಂಧನ ಉತ್ಪಾದನಾ ಘಟಕಗಳ ಮೇಲೆ ದಾಳಿ ನಡೆಸುವುದನ್ನು ಉಕ್ರೇನ್ ನಿಲ್ಲಿಸಬೇಕು ಎಂದು ಡೊನಾಲ್ಡ್ ಟ್ರಂಪ್, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರಿಗೆ ಕರೆ ನೀಡಿದ್ದಾರೆ. ಇಂತಹ ದಾಳಿಗಳು ಇಂಧನ ಕೊರತೆಗೆ ಕಾರಣವಾಗುವುದರ ಜೊತೆಗೆ ಜಾಗತಿಕ ಇಂಧನ ಮಾರುಕಟ್ಟೆಗಳ ಮೇಲೆ ಒತ್ತಡ ಹೆಚ್ಚಿಸುತ್ತಿವೆ ಎಂದು ಅವರು ಹೇಳಿದ್ದಾರೆ. ಇದೇ ವೇಳೆ, ಉಕ್ರೇನ್‌ನ ಪ್ರಮುಖ ಮೂಲಸೌಕರ್ಯಗಳ ಮೇಲೆ ರಷ್ಯಾ ದಾಳಿ ನಡೆಸುವುದಿಲ್ಲ ಎಂಬ ಖಾತರಿ ದೊರೆತರೆ, ರಷ್ಯಾ ಪ್ರದೇಶದ ಮೇಲಿನ ದಾಳಿಗಳನ್ನು ಸ್ಥಗಿತಗೊಳಿಸಲು ಉಕ್ರೇನ್ ಸಿದ್ಧವಿದೆ ಎಂದು ಝೆಲೆನ್‌ಸ್ಕಿ ತಿಳಿಸಿದ್ದಾರೆ.

**<>><><*><><<>**

ಪಾಕಿಸ್ತಾನ ಆಕ್ರಮಿತ ಜಮ್ಮು-ಕಾಶ್ಮೀರದ ಮಾನವ ಹಕ್ಕುಗಳ ಮಂಡಳಿಯು, ರಾವಲಾಕೋಟ್, ಪೂಂಚ್ ಮತ್ತು ಸುಧ್ನೋತಿ ಜಿಲ್ಲೆಗಳಲ್ಲಿ ಮುಂದುವರಿದಿರುವ ಪ್ರತಿಭಟನೆ ಹಾಗೂ ಅಶಾಂತಿ ಕುರಿತು ಕಳವಳ ವ್ಯಕ್ತಪಡಿಸಿದೆ. ಪ್ರತಿಭಟನೆಗಳು ೧೦೦ ದಿನಗಳನ್ನು ಪೂರ್ಣಗೊಳಿಸಿದ್ದು, ಇದರಿಂದ ಆ ಪ್ರದೇಶದಲ್ಲಿ ಅನಿಶ್ಚಿತತೆ ಮುಂದುವರಿದಿದೆ. ಮಾತುಕತೆ ಆರಂಭಿಸುವಲ್ಲಿ ಮತ್ತಷ್ಟು

ವಿಳಂಬವಾದರೆ ಸಾರ್ವಜನಿಕರಲ್ಲಿ ಅಸಮಾಧಾನ, ಮತ್ತು ಅಸ್ಥಿರತೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಮಂಡಳಿ ಹೇಳಿದೆ. ಪಾಕಿಸ್ತಾನ ಸರ್ಕಾರ ಹಾಗೂ ಸಂಬಂಧಪಟ್ಟ ಎಲ್ಲರೂ ತಕ್ಷಣ ಮಾತುಕತೆ ಆರಂಭಿಸಿ, ಸಂಯಮ ವಹಿಸುವಂತೆ ಮತ್ತು ಶಾಂತಿಯುತ ಹಾಗೂ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂತೆ ಮಂಡಳಿ ಮನವಿ ಮಾಡಿದೆ.

**<><><*><><<>**

ವೈಜ್ಞಾನಿಕ ಸಂಶೋಧನಾ ಲೇಖನಗಳನ್ನು ಆಸಕ್ತಿದಾಯಕ ಹಾಗೂ ಸುಲಭವಾಗಿ ಅರ್ಥವಾಗುವ ಕಿರು ವಿಡಿಯೊಗಳಾಗಿ ಪರಿವರ್ತಿಸಲು ಸಿಎಸ್‌ಐಆರ್‌ನ ರಾಷ್ಟ್ರೀಯ ವಿಜ್ಞಾನ ಸಂವಹನ ಮತ್ತು ನೀತಿ ಸಂಶೋಧನಾ ಸಂಸ್ಥೆ ನೂತನ ಉಪಕ್ರಮವನ್ನು ಅಳವಡಿಸಿಕೊಂಡಿದೆ.

**<><><*><><<>**

ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಪುರುಷರ ಎರಡನೇ ಟಿ-೨೦ ಪಂದ್ಯದಲ್ಲಿ ಭಾರತ ಮತ್ತು ಅಫ್ಘಾನಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

ಮೂರು ಪಂದ್ಯಗಳ ಸರಣಿಯಲ್ಲಿ ಭಾರತ ೧-೦ ಮುನ್ನಡೆಯಲ್ಲಿದೆ. ಸರಣಿಯ ಮೂರನೇ ಪಂದ್ಯ ಇದೇ ೧೭ ರಂದು ನಡೆಯಲಿದೆ.

**<><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ಕ್ಕೆ ><><<>**